**Civil Misc No. 113/2021**

**PW- 1**

ದಿ: **06-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ.

ನಾನು ಈ ಕೇಸಿನ ಅರ್ಜಿದಾರ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ಸಲ್ಲಿಸುತ್ತಿದ್ದು, ಅದರಲ್ಲಿ ತಿಳಿಸಿರುವ ಎಲ್ಲಾ ಮಾಹಿತಿ ಸತ್ಯವಾಗಿರುತ್ತವೆ ಎಂದು ತಿಳಿದು ಸಹಿ ಮಾಡಿರುತ್ತೇನೆ.

ಸದರಿ ಸಾಕ್ಷ್ಯಕ್ಕೆ ಅನುಗುಣವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ನಿಪಿ-1 ಜಮೀನಿನ ಪಹಣಿ.

ನಿಪಿ-2 ಮಾಹಿತಿ ಹಕ್ಕು ಕಾಯ್ದೆಡಿ ಎದುರುದಾರರು ನೀಡಿರುವ ವಿದ್ಯುತ್ ಪ್ರಸರಣ ಮಾರ್ಗಗಳಯಾದಿ.

ನಿಪಿ-3 ಬೇವೂರು ಗ್ರಾಮದ ಭೂಮಾಲೀಕರಿಗೆ ವಿತರಣೆ ಮಾಡಿದ ಪರಿಹಾರ ಮೊತ್ತದ ಯಾದಿ.

ಪಾಟೀಸವಾಲು : ಎದುರುದಾರರ ಪರವಾಗಿ.

ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿ ಇದೆ**

(ಚಂದ್ರಶೇಖರ ಸಿ)
ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕೊಪ್ಪಳ.**

**Civil Misc No. 113/2021**

**PW- 1**

ದಿಃ **13-08-2024** ರಂದು ಪ್ರಾಸಾ-1 ಸಾಕ್ಷಿಯು ನ್ಯಾಯಲಯದ ಎದುರು ಪುನಃ ಹಾಜರಿದ್ದು, ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು ಃ ಎದುರುದಾರರ ಪರವಾಗಿ.

**09.** ನನ್ನ ಜಮೀನಿನ ವಿಸ್ತೀರ್ಣ ಸುಮಾರು **4** ಎಕರೆ ಇರುತ್ತದೆ. ಕೇಸು ದಾಖಲು ಮಾಡಲು ನಾನೇ ಮಾಹಿತಿ ಕೊಟ್ಟೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತಯಾರಿಸಲೂ ಸಹ ನಾನೇ ಮಾಹಿತಿ ಕೊಟ್ಟೆ. ನಮ್ಮ ಹೊಲದಲ್ಲಿ ಟವರ್ ಮತ್ತು ಲೈನ್ ಹಾಕುವ ಸಂದರ್ಭದಲ್ಲಿ ಬೆಳೆ ಪರಿಹಾರ ಹಣ ರೂ. **5,000/-** ಕೊಡಲಾಗಿತ್ತು. ನಮ್ಮ ಹೊಲದಲ್ಲಿ ಟವರ್ ಮತ್ತು ಲೈನ್ ಹಾಕಿರುವುದರಿಂದ ನನಗೆ ಯಾವುದೇ ರೀತಿ ತೊಂದರೆ ಅಥವಾ ನಷ್ಟ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಜಮೀನಿನಲ್ಲಿ ಕೊಳವೆ ಬಾವಿ ಇದೆ ಆದರೆ ಕಂಬ ಹಾಕಿರುವುದರಿಂದ ನೀರು ಇಲ್ಲ. ನಮ್ಮ ಜಮೀನಿನಲ್ಲಿ ನಾನು ಈಗಲೂ ಸಹ ವ್ಯವಸಾಯ ಮಾಡುತ್ತಿದ್ದೇನೆಂದರೆ ಸರಿ. ಆದರೆ ಟವರ್ ಮತ್ತು ಲೈನ್ ಹಾಕಿರುವ ಜಾಗದಲ್ಲಿ ವ್ಯವಸಾಯ ಮಾಡುತ್ತಿಲ್ಲ. ಟವರ್ ಮತ್ತು ಲೈನ್ ಹಾಕಿರುವ ಕಾರಣ ಆ ಜಾಗದಲ್ಲಿ ಕೊಳವೆ ಬಾವಿಹಾಕಿಸಲು ಆಗುವುದಿಲ್ಲ. ಯಾವುದೇ ತೊಂದರೆ ಆಗದಿದ್ದರೂ ಸಹ ನಾನು ಸುಳ್ಳು ಕೇಸು ಹಾಕಿರುತ್ತೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿ ಇದೆ**

(ಚಂದ್ರಶೇಖರ ಸಿ)
ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

**ಕೊಪ್ಪಳ.**